MYSORE LEGISLATIVE ASSEMBLY

FIFTY-THIRD DAY.

Wednesday, 8th July 1964.

The House met in the Assembly Hall, Vidhana Soudha, Bangalore, Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Starting of a Girls' College at Shimoga

*Q.—647 Smt. RATNAMMA MADHAVA RAO (Shimoga).—

Will the Government be pleased to state.—

(*a*) whether they are aware of the necessity of starting a Girl' College at Shimoga;

(*b*) whether there is any proposal before the Government in this behalf;

(*c*) whether they would take necessary action to start a Girls' College in Shimoga during this year?

*A.— Sri S. R. KANTHI (Minister for Education).—

(*a*) No.
(*b*) No.
(*c*) No.

ಶ್ರೀಮತಿ ರತ್ನಮ್ಮ ಮಾಧವರಾವ್.—ಈಗಿರುವ ಶಿವಮೊಗ್ಗ ಕಾಲೇಜಿನಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ಅದೆಲ್ಲ ವಿದ್ಯಾರ್ಥಿನಿಯರು ಎಷ್ಟು ಇದ್ದಾರೆ?

†ಶ್ರೀ ಎಸ್. ಆರ್. ಕಂಠಿ.—ಈ ವರ್ಷದ ಅಂಖ್ಯೆಸಂಖ್ಯೆಗಳನ್ನು ಹೇಳುವುದಕ್ಕಾಗುವುದಿಲ್ಲ, ಏಕೆಂದರೆ ಅಡ್ಮಿಷನ್ಸ್ ಆಗುತ್ತಿದೆ. ಹೋದವರ್ಷದ ಅಂಖ್ಯೆಸಂಖ್ಯೆಗಳನ್ನು ಹೇಳಬಹುದು. ಒಟ್ಟು 1,484 ವಿದ್ಯಾರ್ಥಿಗಳು ಇದ್ದರು, ಅದರಲ್ಲಿ ಹುಡುಗರ ಸಂಖ್ಯೆ 1,208 ಮತ್ತು ಹುಡುಗಿಯರ ಸಂಖ್ಯೆ 276.

ಶ್ರೀಮತಿ ರತ್ನಮ್ಮ ಮಾಧವರಾವ್.—ಶಿವಮೊಗ್ಗಾದ ಸುತ್ತ ಮುತ್ತ ಇರುವ ಹೈಸ್ಕೂಲುಗಳಿಂದ ಪ್ರತಿವರ್ಷ ಎಷ್ಟುಜನ ವಿದ್ಯಾರ್ಥಿಗಳು ಕಾಲೇಜಿಗೆ ಬರುತ್ತಾರೆ?

† Indicates that the remarks or speeches have not been revised by the member concerned.

ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ನೋಟಿಸ್ ಬೇಕು.

ಶ್ರೀಮತಿ ರತ್ನಮ್ಮ ಮಾಧವರಾವ್.—ಶಿವಮೊಗ್ಗಾದಲ್ಲಿ ಮಹಿಳೆಯರಿಗೆ ಬೇರೆ ಕಾಲೇಜಿಲ್ಲ ವಾದ್ದರಿಂದ ಅವರಿಗಾಗಿ ಒಂದು ಕಾಲೇಜನ್ನು ತೆರೆಯುವುದು ಅವಶ್ಯಕವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಕೊಡುವವರು ಯೂನಿವರ್ಸಿಟಿಯವರು, ನಾವೆಲ್ಲ. ನವೆಂಬರಿನಲ್ಲಿ ಅಪ್ಲಿಕೇಷನ್ ಹಾಕಿದರು, ಆದುದರಿಂದ ಈ ವರ್ಷ ಕೊಡುವುದಕ್ಕಾಗುವುದಿಲ್ಲವೆಂದು ಉತ್ತರ ಬಂದಿದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಹಾಗಾದರೆ ಮುಂದಿನ ವರ್ಷವಾದರೂ ಕೊಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ನಕಾಲದಲ್ಲಿ ಕೇಳಿದರೆ ಕೊಡುತ್ತಾರೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಈಗಿರುವ ಕಾಲೇಜು ಟೌನಿಗೆ ದೂರವಾಗಿರುವುದರಿಂದ ಟ್ರಾನ್ಸ್‌ಪೋರ್ಟ್ ವ್ಯವಸ್ಥೆ ಮಾಡುವ ಯೋಚನೆಯೆನಾದರೂ ಇದೆಯೇ ?

ಶ್ರೀ ಎಸ್ ಆರ್. ಕಂಠಿ— ಹೆಣ್ಣುಮಕ್ಕಳಿಗೆ ಕಾಲೇಜು ತೆಗೆಯಬೇಕೆಂದರೆ ಅದನ್ನು ಯೂನಿವರ್ಸಿಟಿಯವರು ಪ್ರೊವೈಡ ಮಾಡಬೇಕಾಗುತ್ತದೆ, ಈಗ ಅನುಕೂಲವಿರಬೇಕು.

ಶ್ರೀ ಸಿ. ಜೆ ಮುಕ್ಕಣ್ಣಪ್ಪ.—ನರ್ಕಾರದವರು ಹೆಣ್ಣುಮಕ್ಕಳಿಗಾಗಿ ಕಾಲೇಜು ತೆರೆಯಲು ಯೋಚನೆಮಾಡಿರುವರೇ ?

ಅಧ್ಯಕ್ಷರು.—ಅದಕ್ಕೆ ಮಾನ್ಯಮಂತ್ರಿಗಳು ಆಗಲೆ ಉತ್ತರ ಹೇಳಿದ್ದಾರೆ.

ಶ್ರೀ ಪಿ. ಎಸ್. ಲಕ್ಷ್ಮೀಕಾಂತಪ್ಪ.—ಈಗ ಶಿವಮೊಗ್ಗ ಕಾಲೇಜಿನಲ್ಲಿ ಸ್ಥಳಾವಕಾಶವಿಲ್ಲದೆ ಬಾಲಕಿಯರಿಗೆ ತೊಂದರೆಯಾಗಿರುವುದರಿಂದ ಈಗಿರುವ ಕಾಲೇಜನ್ನು ಬಡಾವಣೆಗೊಳಿಸುವುದಕ್ಕೆ ಬದಲಾಗಿ ಬೇರೊಂದು ಕಾಲೇಜನ್ನು ತೆರೆಯಲು ಸರ್ಕಾರ ಆಲೋಚನೆ ಮಾಡುತ್ತದೆಯೇ?

ಶ್ರೀ ಎಸ್. ಆರ್. ಕಂಠಿ.—1,484 ವಿದ್ಯಾರ್ಥಿಗಳ ಹೈಕಿ ಹೋದವರ್ಷ ಪಿ ಯು ಸಿ ನಲ್ಲಿ 711 ವಿದ್ಯಾರ್ಥಿಗಳಿದ್ದರು. ಈ ವರ್ಷ 11ನೆಯ ಸ್ಟ್ಯಾಂಡರ್ಡ್ ತೆರೆಯಲು ಎರಡು ಹೈಸ್ಕೂಲುಗಳಿಗೆ ಅನುಮತಿಕೊಡಲಾಗಿದೆ.

ಶ್ರೀ ಜಿ. ವಿ. ಗೌಡ.—ಸಕಾಲದಲ್ಲಿ ಅರ್ಜಿ ಹಾಕಿದರೆ ಕಾಲೇಜನ್ನು ತೆರೆಯುವವರು ಯೂನಿವರ್ಸಿಟಿಯವರೇ ಅಥವಾ ಅರ್ಜಿ ಹಾಕಿದವರೇ ತೆರೆಯಬೇಕೆ?

ಶ್ರೀ ಎಸ್. ಆರ್. ಕಂಠಿ.—ಅವರು ಸೆನೇಟ್ ಸದಸ್ಯರಾದ್ದರಿಂದ ನಿಯಮವೇನಿದೆಯೆಂಬುದು ನನಗಿಂತ ಅವರಿಗೆ ಚೆನ್ನಾಗಿ ಗೊತ್ತಿದೆ.

Sri G. V. GOWDA.—Who is to start the College?

ಶ್ರೀ ಎಸ್. ಆರ್. ಕಂಠಿ.—ಯೂನಿವರ್ಸಿಟಿ ತೆಗೆಯುವ ವಿಚಾರ ಗೊತ್ತಿಲ್ಲ, ನರ್ಕಾರ ತೆಗೆಯುವುದಿಲ್ಲ.

ಶ್ರೀ ಜಿ. ವಿ ಗೌಡ —ಈಗ ನರ್ಕಾರಿ ಕಾಲೇಜುಗಳಿಷ್ಟಿವೆ? ಅಗತ್ಯವಿರುವ ಕಡೆ ನರ್ಕಾರವೇ ತೆರೆಯುವುದು ಉತ್ತಮವಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ನರ್ಕಾರ ಕಾಲೇಜನ್ನು ತೆರೆಯುವ ಅಭಿಪ್ರಾಯವನ್ನಿಟ್ಟು ಕೊಂಡಿಲ್ಲ.

ಶ್ರೀ ಸಿ ಜೆ. ಮುಕ್ಕಣ್ಣಪ್ಪ.— ಹುಡುಗರು ಮತ್ತು ಹುಡುಗಿಯರಿಗೆ ಬೇರೆ ಬೇರೆ ಕಾಲೇಜನ್ನು ತೆರೆಯುವುದಕ್ಕೆ ಮತ್ತು ಕೋ ಎಜುಕೇಷನ್ನಿಗೆ ನರ್ಕಾರ ವಿರುದ್ಧವಿದೆಯೇ?

ಶ್ರೀ ಎಸ್. ಆರ್. ಕಂಠಿ.—ಸೆಪರೇಟ್ ಎಜುಕೇಷನ್ ಸೆಕೆಂಡರಿ ಎಜುಕೇಷನ್ ಮಟ್ಟದಲ್ಲಿದೆ, ಆಲ್ಲಿ ಕೋಎಜುಕೇಷನ್ ಇರಬಾರದೆಂಬ ಅಭಿಪ್ರಾಯವಿದೆ. ಕಾಲೇಜುಗಳಲ್ಲಿ ಕೋಎಜುಕೇಷನ್ ಇರಬಹುದು. ಹೆಣ್ಣುಮಕ್ಕಳಿಗೆ ಬೇರೆ ಕಾಲೇಜು ಬೇಕಾದರೆ ಪ್ರೈವೇಟ್ ಕಾಲೇಜನ್ನು ಮಾಡಿಕೊಳ್ಳಬಹುದು.

ಶ್ರೀ ಡಿ. ಯಂ ಸಿದ್ದಯ್ಯ.—ನಮ್ಮ ರಾಜ್ಯದಲ್ಲಿ ಹೆಣ್ಣುಮಕ್ಕಳಿಗಾಗಿ ನರ್ಕಾರೀ ಕಾಲೇಜುಗಳು ಎಲ್ಲೆಲ್ಲಿ ಎಷ್ಟಿಷ್ಟಿವೆ?

Sri S. R. KANTHI.—I think there are Government Colleges and one or two private college. There is one private college in Mysore and one here. There are two private colleges in Mangalore.

ಶ್ರೀ ಎಸ್. ಎಂ. ಕೃಷ್ಣಪ್ಪ.—ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳಿಗೆ ಸೆಕೆಂಡರಿ ಎಜುಕೇಷನ್ ಲೆವಲ್‌ನಲ್ಲಿ ಬೇರೆ ಬೇರೆ ಶಾಲೆಗಳಿರಬೇಕೆಂದು ಹೇಳಿದರು. ಆದನ್ನು ಪುನರಾಲೋಚನೆ ಮಾಡಿ ಕೋಎಜುಕೇಷನ್ನನ್ನು ಚಿಕ್ಕತರಗತಿಯಿಂದಲೇ ಜಾರಿಗೆ ತರುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಸೆಕೆಂಡರಿ ಲೆವಲ್‌ನಲ್ಲಿ ಕೋಎಜುಕೇಷನ್ ಇರಬಾರದೆಂದು ಎಕ್ಸ್‌ಪರ್ಟ್ಸ್ ಹೇಳಿದ್ದಾರೆ. ಲಕ್ಷ್ಮಣಸ್ವಾಮಿ ಮೊದಲಿಯಾರ್ ಕಮಿಟಿ ವರದಿಯಲ್ಲಿ ಅದು ನಮೂದಾಗಿದೆ. ಅವರುಕೊಟ್ಟ ವರದಿಯಲ್ಲಿ ಅದಷ್ಟು ಸೆಕೆಂಡರಿ ಎಜುಕೇಷನ್ ಲೆವಲ್‌ನಲ್ಲಿ ಕಡಮೆಮಾಡಬೇಕೆಂದು ತಿಳಿಸಿದ್ದಾರೆ. ಆದರೆ ಬಹಳ ಕಷ್ಟ ಈಗ 1,350 ಹೈಸ್ಕೂಲುಗಳಿವೆ, 70 ಮಾತ್ರ ಹೆಣ್ಣುಮಕ್ಕಳಿಗೆ ಪ್ರತ್ಯೇಕವಾಗಿವೆ. ಆದರೆ ಹೈಯರ್ ಎಜುಕೇಷನ್ ವಿಚಾರದಲ್ಲಿ ಪ್ರತ್ಯೇಕ ಶಾಲೆಗಳಿರಬೇಕೆಂದು ಹೇಳಿಲ್ಲ, ಕೋಎಜುಕೇಷನ್ ಆ ಲೆವಲ್‌ನಲ್ಲಿರಬಹುದು.

ಶ್ರೀ ಜಿ. ವಿ. ಗೌಡ.—ಮುಂದೆ ಸರ್ಕಾರ ಯಾವ ಕಾಲೇಜನ್ನೂ ತೆರೆಯುವುದಿಲ್ಲ ಎಂದು ಮಾನ್ಯಮಂತ್ರಿಗಳು ಹೇಳಿದರು. ಈಗಿರುವ ಸರ್ಕಾರಿ ಕಾಲೇಜುಗಳನ್ನು ಯೂನಿವರ್ಸಿಟಿಗೆ ವಹಿಸಲು ವ್ಯವಸ್ಥೆಮಾಡತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಯೂನಿವರ್ಸಿಟಿಗೆ ಸೇರಿದ್ದುದನ್ನು ಲಕ್ಷ್ಮಣಸ್ವಾಮಿ ಮೊದಲಿಯಾರ್ ಕಮಿಟಿ ಶಿಫಾರಸ್ಸಿನಮೇಲೆ ನಾವು ವಾಪಸ್ಸುತೆಗೆದುಕೊಂಡಿರುವುದರಿಂದ ಪುನಃ ಕೊಡುವ ವಿಚಾರ ಬರುವುದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ.—ಕಾಲೇಜುಗಳಲ್ಲಿ ವ್ಯಾಸಂಗಮಾಡತಕ್ಕ ವಯಸ್ಕರಾದ ಹೆಣ್ಣುಮಕ್ಕಳಿಗೆ ಬೇರೆಕಾಲೇಜು ಇರಬೇಕಾದುದು ಅವಶ್ಯಕ. ಆದ್ದರಿಂದ ಈಗ ಸರಕಾರದವರು ಅನುಸರಿಸುತ್ತಿರುವ ನೀತಿಯನ್ನು ಬದಲಾಯಿಸಿ ಹೆಣ್ಣುಮಕ್ಕಳಿಗೆ ಪ್ರತ್ಯೇಕವಾದ ಕಾಲೇಜುಗಳನ್ನು ಸ್ಥಾಪಿಸಲು ವ್ಯವಸ್ಥೆಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಈ ಪಾಲಿಸಿ ಸರ್ಕಾರದ್ದಲ್ಲ. ಇದು ಅವರ ಸ್ವಂತ ಅಭಿಪ್ರಾಯ. ಆದರೆ ಎಕ್ಸ್‌ಪರ್ಟುಗಳ ಅಭಿಪ್ರಾಯ ಹಾಗಿಲ್ಲ.

Temporary Progress Assistants working in Development Blocks in the State

*Q.—658 **V. S. LAKSHMIKANTHAPPA** (Sagar).—

Will the Government be pleased to state.—

(*a*) the number of temporary Progress Assistants in the Development Blocks in the State who have put in more than 3 years of service;

(*b*) the action taken by them to regularise such Progress Assistants as per Cadre and Recruitment Rules?

*A.— **Sri RAMAKRISHNA HEGDE** (Minister for Development, Panchayat Raj and Co-operation)

(*a*) 12

(*b*) The services of the Assistants concerned cannot be regularised as they do not possess the minimum qualification prescribed for the post.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಉತ್ತರದಲ್ಲಿ 12 ಜನ ಎಂದಿದೆ 57ನೇ ಇನವಿಯಲ್ಲಿ 35 ಜನರನ್ನು ತರಬೇತಿಗಾಗಿ ಕಳುಹಿಸಿದಾಗ ಈ ತಂಡದಲ್ಲೇ ಈ 12 ಜನರೂ ಸೇರಿರಲಿಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ತಂಡದಲ್ಲಿದ್ದರೂ ಇರಬಹುದು. ಆದರೆ ಎಲ್ಲರೂ ಇದರಲ್ಲಿ ಬರುವುದಿಲ್ಲ.

Sri SIDDAIAH KASHIMATH.—What are the minimum qualifications for regularisation ?